ಶ್ರೀ ಬಾಬುರೆಡ್ಡಿ ಎ. ತುಂಗಳ್.—ನನ್ನ (ಅ) ಪ್ರಶ್ನೆಗೆ ಜಿಲ್ಲಾ ಪರಿಷತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳು ಪ್ರಯಾಣ ಭತ್ಯೆ ಪಡೆಯುವುದಕ್ಕೆ ಸರ್ಕಾರ ಮೇನಾದರೂ ನಿರ್ದಿಷ್ಟ ಸೂಚನೆ ನೀಡಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಇಲ್ಲವೆಂದು' ಉತ್ತರ ಕೊಡಲಾಗಿದೆ. ಕಳೆದ ಅಧಿವೇಶನದಲ್ಲಿ ಈ ಬಗ್ಗೆ ೧೯ ಜಿಲ್ಲೆಗಳಲ್ಲಿ ಪ್ರತಿಯೊಂದು ಜಿಲ್ಲೆಯ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಪ್ರಯಾಣ ಭತ್ಯ ಮತ್ತು ಮನೆಯ ಪೀಠೋಪಕರಣಗಳ ಬಗ್ಗೆ ಕೊಟ್ಟ ಉತ್ತರವನ್ನು ನೋಡಿದರೆ ಬಹುಶ: ಭಯವಾಗುತ್ತದೆ. ಏಕೆಂದರೆ ಬಹಳ ದೊಡ್ಡ ಉದ್ದೇಶವನ್ನು ಇಟ್ಟುಕೊಂಡು ಗಾಂಧೀ ಮಾರ್ಗದಿಂದ ಅಧಿಕಾರ ವಿಕೇಂದ್ರೀಕರಣ ಮಾಡಲಾಗಿದೆ. ಈಗ ಅವರ ಖರ್ಚುವೆಚ್ಚ ಪ್ರಯಾಣ ಭತ್ಯ ಮತ್ತು ಕಚೇರಿಗಳ ಹಾಗೂ ಮನೆಗಳ ಡೆಕೋರೇಷನ್ ನೋಡಿದರೆ ನಾವು ಗಾಂಧೀಮಾರ್ಗದಿಂದ ಬಹಳ ದೂರ ಹೋಗುತ್ತಿದ್ದೇವೆಂದು ಭಾಸವಾಗುತ್ತದೆ. ಅವರಿಗೆ ಸೌಕರ್ಯ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಒಬ್ಬೊಬ್ಬ ಜಿಲ್ಲಾ ಪರಿಷತ್ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಮನೆಗಳ ಪೀಠೋಪಕರಣಗಳಿಗಾಗಿ ಖರ್ಚು ಮಾಡಿರುವುದು ಮಂತ್ರಿಗಳ ಮನೆಗೂ ಖರ್ಚುಮಾಡಿಲ್ಲವೆನ್ನುವ ಸಂಶಯ ಬರುತ್ತದೆ. ಇದು ಯಾವ ಗಾಂಧೀ ತತ್ವವನ್ನು ಅನುಸರಿಸುತ್ತದೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ನಾನು ಕೇಳಬಯಸುತ್ತೇನೆ. ಸಂಚಾರ ಭತ್ಯಕ್ಕೆ ಮಿತಿ ಇರಬೇಕು. ಅಧ್ಯಕ್ಷರೇ ತಮಗೂ ಸ್ವತಂತ್ರ ಗೊತ್ತಿದೆ. ಅಧಿಕಾರ ವಿಕೇಂದ್ರೀಕರಣವೆಂದು ಹೇಳುತ್ತೇವೆ, ಇವತ್ತು ಹಳ್ಳಿಗಳಲ್ಲಿ ಹೆಂಗಸರಿಗೆ ಕಕ್ಕಸುಗಳು ಇಲ್ಲ. ನನ್ನ ಊರಿನಲ್ಲಿಯೂ ಸಹ ಇಲ್ಲ. ಇಂಥದ್ದರಲ್ಲಿ ಅವರ ಪ್ರಯಾಣ ಭತ್ಯ ಮಿತಿಮೀರಿದೆ, ಈ ಬಗ್ಗೆ ನನ್ನ ಆಕ್ಷೇಪವಿದೆ. ದಯವಾಡಿ ಈ ಬಗ್ಗೆ ಮಿತಿ ಹಾಕಬೇಕು. ಸರ್ಕಾರ ಪ್ರವಾಸಭತ್ಯೆ, ಮನೆಗಳ ಪೀಠೋಪಕರಣ ಮತ್ತು ಕಚೇರಿಗಳ ಅಲಂಕಾರದ ಬಗ್ಗೆ ಒಂದು ನಿರ್ಬಂಧ ಹಾಕಬೇಕೆಂದು ಗಾಂಧೀತತ್ವವನ್ನು ಅಧಿಕಾರ ವಿಕೇಂದ್ರೀಕರಣದ ಮೂಲಕ ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡಿದ ಮಾನ್ಯ ನಜೀರ್‌ಸಾಬ್‌ರವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಜಿಲ್ಲಾ ಪರಿಷತ್‌ನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಶಾಸನದ ಪ್ರಕಾರ ಟಿಎ, ಡಿಎ ಪಡೆಯುತ್ತಾರೆ. ಶಾಸನದಲ್ಲಿ ಏನು ಹೇಳುತ್ತೇವೆಂದರೆ ಅಧ್ಯಕ್ಷರು ರಾಜ್ಯಮಂತ್ರಿಗಳು ಏನೇನು ತೆಗೆದುಕೊಳ್ಳಬಹುದೋ ಅದನ್ನು ತೆಗೆದುಕೊಳ್ಳಬಹುದೆಂದು ಹೇಳಿದ್ದೇವೆ. ಉಪ ಮಂತ್ರಿಗಳಿಗೆ ಏನು ಕೊಡುತ್ತಿದ್ದೇವೆಯೋ ಅದನ್ನು ಉಪಾಧ್ಯಕ್ಷರು ತೆಗೆದುಕೊಳ್ಳಬೇಕೆಂದು ಶಾಸನ ಮಾಡಿದ್ದೇವೆ. ಮಾನ್ಯ ಸದಸ್ಯರು ಗಾಂಧೀವಾದದಂತೆ ಸರಳವಾಗಿ ಬದುಕಬೇಕು ಎಂದು ಏನು ಹೇಳಿದ್ದಾರೆ, ಈ ತತ್ವವನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಬಿಜಾಪುರ ಜಿಲ್ಲಾ ಪರಿಷತ್ ಅಧ್ಯಕ್ಷರ ನಿವಾಸ ಮತ್ತು ಕಚೇರಿಗಳ ಒಳ ಅಲಂಕಾರಕ್ಕೆ ಆಗಿರುವ ಖರ್ಚಿನ ಬಗ್ಗೆ ಪ್ರಶ್ನೆ ಇದೆ. ಆಗಿರುವ ಖರ್ಚು ೨೩ ಮತ್ತು ೧೧ ಸಾವಿರ ರೂಪಾಯಿಗಳು ಎಂದು ಹೇಳಿದ್ದೇನೆ. ಇದು ಬಹಳ ದೊಡ್ಡದೆಂದು ಭಾವಿಸುವಷ್ಟು ದೊಡ್ಡ ಪ್ರಶ್ನೆ ಅಲ್ಲ. ಬೇಕಾದರೆ ಇನ್ನೊಂದು ಸಂದರ್ಭದಲ್ಲಿ ಇದಕ್ಕೆ ನಾನು ಉತ್ತರ ಹೇಳುತ್ತೇನೆ. ಅವರು ಜಿಲ್ಲಾ ಪರಿಷತ್ತಿನ ಕಾರ್ಯವಿಧಾನಕ್ಕೆ ಸಂಬಂಧಪಟ್ಟಂತೆ ರಾಜ್ಯಮಟ್ಟದಲ್ಲೂ ಪ್ರವಾಸ ಹೋಗಬೇಕಾಗುತ್ತದೆ. ಅವರ ಟಿ. ಎ. ಡಿ. ಎ. ಬಗ್ಗೆ ನಿರ್ಬಂಧ ಹಾಕುವಂಥ ಯಾವ ಸಲಹೆಯನ್ನೂ ಸರ್ಕಾರ ಪರಿಶೀಲನೆಯನ್ನು ಇಟ್ಟುಕೊಂಡಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳ ಮಂಜೂರಾತಿ

೧೦೦೫ ಶ್ರೀ ಬಿ. ಲಕ್ಕಪ್ಪ. (ಚಿಕ್ಕ ನಾಯಕನಹಳ್ಳಿ),—ಮಾನ್ಯ ಪಾರ್ವಾ, ಪ್ರವಾಸೋದ್ಯಮ ಸಂಸ್ಕೃತಿ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನಿವೇಶನಗಳನ್ನು ಹಂಚಿಕೆ ಮಾಡುವಾಗ ಪ್ರತಿಯೊಂದು ಪ್ರದೇಶದಲ್ಲಿಯೂ ಶೇ. ೧೮ ರಷ್ಟು ನಿವೇಶನಗಳನ್ನು ಮಾಸಲಿಡಬೇಕಾಗಿರುವುದು ನಿಜವಲ್ಲವೇ ?

(ಆ) ಹಾಗಿದ್ದಲ್ಲಿ ೧೯೮೭ರ ಜನವರಿ ಜಾಹೀರಾತಿನ ಪ್ರಕಾರ ಹಂಚಿಕೆ ಮಾಡಲಾದ ನಿವೇಶನಗಳೆಷ್ಟು ?

(ಇ) ಈ ಪ್ರದೇಶದಲ್ಲಿ ಹರಿಜನ ಗಿರಿಜನರಿಗೆ ಕೊಟ್ಟ ಶೇಕಡಾವಾರು ನಿವೇಶನಗಳೆಷ್ಟು ?

ಶ್ರೀ ಎಂ. ಪಿ. ಪ್ರಕಾಶ್, (ಬೆಂಗಳೂರು ಅಭಿವೃದ್ಧಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರು),—

ಅ) ನಿಜ.

ಆ) ೮೯೧ (ಒಟ್ಟು ೪೮೧೩ ನಿವೇಶನಗಳ ಪೈಕಿ)

ಇ) ೩೦' x ೪೦ ' ಹಾಗೂ ಹೆಚ್ಚಿನ ಅಳತೆಯ ನಿವೇಶನ

ಎಸ್. ಸಿ. — ಶೇ. ೧೩	
ಎಸ್. ಟಿ. — ಶೇ. ೩	
ಬಿ. ಟಿ. — ಶೇ. ೨	
ಒಟ್ಟು — ಶೇ. ೧೮	

ಇ, ಡಬ್ಲ್ಯೂ. ಎಸ್ ನಿವೇಶನಗಳು ೨೦' x ೩೦ '

ಎಸ್. ಸಿ. — ಶೇ. ೧೫	
ಎಸ್. ಟಿ. — ಶೇ. ೩	
ಬಿ. ಟಿ. — ಶೇ. ೨	
ಒಟ್ಟು — ಶೇ. ೨೦	

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೇ, ೮೯೧ ನಿವೇಶನಗಳನ್ನು ಎಸ್. ಸಿ. : ಎಸ್ ಟಿ ವರ್ಗದವರಿಗೆ ಕೊಡಲಾಗಿದೆಯೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದನ್ನು ಯಾವ ರೇಟ್‌ನಲ್ಲಿ ಕೊಡಲಾಗಿದೆ ? ಏಕೆಂದರೆ ಇಲ್ಲಿ ಒಂದು ಕಡೆ ೫-೭-೮೭ರಲ್ಲಿ ಮಾನ್ಯ ಸಚಿವರು ಆಕ್ಚ್ಯುಯಲ್ ಕಾಸ್ಟ್‌ನ ೨೫ ಪರ್ಸೆಂಟ್‌ಗೆ ಕೊಡುತ್ತೇವೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಇನ್ನೊಂದು ಕಡೆ ಹೇಳುತ್ತಾರೆ ೨೫ ಪರ್ಸೆಂಟ್ ಸಬ್ಸಿಡಿ ರೇಟ್‌ನಲ್ಲಿ ಕೊಡುತ್ತೇವೆ ಎಂದು ಆದ್ದರಿಂದ ಯಾವ ರೇಟ್‌ನಲ್ಲಿ ಈ ನಿವೇಶನಗಳನ್ನು ಕೊಡಲಾಗಿದೆ ಎಂದು ಹೇಳುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ಬೇರೆ ಬೇರೆ ಕಾರ್ಯಕ್ರಮಗಳ ಮೂಲಕ ಹಾಕಿಕೊಂಡಿರತಕ್ಕಂಥಾದ್ದು ಈ ಯೋಜನೆ, ಡಾಕ್ಟರ್ ಅಂಬೇಡ್ಕರ್ ಜನ್ಮಶತಾಬ್ದಿ ಸಂದರ್ಭದಲ್ಲಿ ಎರಡು ಸಾವಿರ ನಿವೇಶನಗಳನ್ನು ಹರಿಜನ ಗಿರಿಜನರಿಗೆ ಕೊಡತಕ್ಕದ್ದರಲ್ಲಿ ಶೇಕಡಾ ೨೫ ರಷ್ಟು ವಾಸ್ತವಿಕವಾಗಿ ಇರತಕ್ಕಂಥ ಬೆಲೆಯಲ್ಲಿ ಕೊಡಬೇಕೆಂದು ನಿರ್ಣಯವಾಗಿರುವುದು ಮಾಮೂಲಾಗಿ ಕರೆದಿರತಕ್ಕಂಥ ಅರ್ಜಿಗಳು ಏನಿವೆ ಅದಕ್ಕೆ ಪ್ರತ್ಯೇಕವಾದಂಥ ದರಗಳು ಇವೆ. ಆ ದರಗಳಲ್ಲೇ ಕೊಟ್ಟಿದೆ.

ಶ್ರೀ ಬಿ. ಲಕ್ಕಪ್ಪ.—೮೯೧ ನಿವೇಶನಗಳನ್ನು ೧೯೮೭ರಲ್ಲಿ ಕೊಡಲಾಗಿದೆಯೆಂದು ಹೇಳಿದ್ದಾರೆ. ಆದರೆ ಇವರು ೫-೭-೮೭ರಲ್ಲಿ ಹೇಳಿದ್ದರಲ್ಲಿ

> " The B D A also Propose to distribute over 25.000 sites this year including 10,000 for SC/ST s. Sites for SC/ST Will be given at 25/% of the actual cost, "

ಎಂದು ಒಂದು ಕಡೆ ಹೇಳಿದ್ದಾರೆ. ಅಲ್ಲಿಗೆ ಮೂರೇ ದಿವಸಕ್ಕೆ ೮-೭-೮೭ರಲ್ಲಿ ಹೇಳಿದ್ದಾರೆ.

> The Minister Mr, M. P. prakash has also said that 3,700 more sites will be distributed in a month to SC/ST at 25% subsidy. 12 areas in the city had been identified for this. "

ಈ ೧೨ ಪ್ರದೇಶಗಳನ್ನು ಗುರುತಿಸಿದ್ದೀರಾ ? ಮತ್ತು ಈ ೮೯ ಪರ್ಸೆಂಟ್‌ನ್ನು ಹೀಗೆ ವಿಂಗಡಣೆ ಮಾಡಿರುವ ಪ್ರದೇಶಗಳಲ್ಲಿ ಕೊಟ್ಟಿದ್ದೀರಾ ? ೧೮ ಪರ್ಸೆಂಟ್‌ಗೆ ಎಲ್ಲವನ್ನೂ ಸೇರಿಸಿ ಹರಿಜನರಿಗೆ ಪ್ರತ್ಯೇಕವಾಗಿ ಇರತಕ್ಕಂಥ ವಿಂಗಡಣೆಯಲ್ಲಿ ಕೊಟ್ಟಿದ್ದೀರಾ ?

ಶ್ರೀ ಎಂ. ಪಿ. ಪ್ರಕಾಶ್.—ನೀವು ಯಾವ ಪತ್ರಿಕೆಯ ಹೇಳಿಕೆಯನ್ನು ಗಮನಿಸಿ ಇದನ್ನು ಹೇಳುತ್ತಿದ್ದೀರಿ ಎಂದು ತಿಳಿಯಲಿಲ್ಲ.

ಶ್ರೀ ಬಿ. ಲಕ್ಕಪ್ಪ.—ಇಂಡಿಯನ್ ಎಕ್ಸ್‌ಪ್ರೆಸ್

ಶ್ರೀ ಎಂ. ಪಿ. ಪ್ರಕಾಶ್.—ವಿವರಗಳನ್ನು ಕಳಿಸಿ ಕೊಟ್ಟಿಗೆ ಅಂಕಿನ ಸಂಪ್ಯೆಗಳ ವ್ಯತ್ಯಾಸ ಇದ್ದರೆ ಸಂಪೂರ್ಣವಾದ ಉತ್ತರವನ್ನು ನಾನು ಕಳಿಸಿಕೊಡಬಹುದು. ಅಧ್ಯಕ್ಷರೇ, ಸುಮಾರು ಹತ್ತು ಸಾವಿರ ನಿವೇಶನಗಳನ್ನು ಡಾ: ಅಂಬೇಡ್ಕರ್ ಜನ್ಮಶತಾಬ್ದಿ ಸಂದರ್ಭದಲ್ಲಿ ಪ್ರತಿ ವರ್ಷ ೨ ಸಾವಿರದಂತೆ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಇದರ ಪ್ರಕಾರ ಇನ್ನು ಐದು ವರ್ಷಗಳ ಕಾಲದಲ್ಲಿ ಸುಮಾರು ಹತ್ತು ಸಾವಿರ ನಿವೇಶನಗಳನ್ನು ಕೊಡತಕ್ಕಂಥ ವ್ಯವಸ್ಥೆ ಇದೆ. ಇದರಲ್ಲಿ ಈಗಾಗಲೇ ೨ ಸಾವಿರ ನಿವೇಶನಗಳನ್ನು ಕೊಟ್ಟಿದ್ದೇವೆ. ೩೦×೪೦ ಅಡಿ ನಿವೇಶನಗಳಿಗೆ ಹೆಚ್ಚಿಗೆ ಇರತಕ್ಕಂದ್ದರಲ್ಲಿ ಮಾಮೂಲಾಗಿ ನಿರ್ಧಾರ ಮಾಡಿರತಕ್ಕ ದರಗಳು ಏನಿವೆ, ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರಿಗೆ ೨೦×೩೦ ಅಡಿ ಅಳತೆಯ ನಿವೇಶನಗಳಿಗೆ ಶೇಕಡ ೨೫ ರಲ್ಲಿ ಕೊಡುತ್ತಿದ್ದೇವೆ. ಮತ್ತೆ ಆರ್ಥಿಕವಾಗಿ ಹಿಂದುಳಿದಿರತಕ್ಕಂಥವರಿಗೆ ೨×೩೦ ಅಡಿ ಅಳತೆಯ ನಿವೇಶನಗಳನ್ನು ಕೊಟ್ಟಾಗ ಶೇಕಡ ೫೦ ಪರ್ಸೆಂಟ್ ಕೂಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಬಿ. ಲಕ್ಕಪ್ಪ.—ಈಗ ಒಬ್ಬರು ಹರಿಜನರಿಗೆ ಕೊಟ್ಟಿದ್ದಾರೆ. ಅವರ ಹೆಸರು ದೇವಿ ಪುಷ್ಪ ರಾಜ್ ಎಂದು ಇವರಿಗೆ ಬಿ. ಡಿ. ಎ. ನವರು ನೋಟೀಸ್ ಕೊಟ್ಟಿದ್ದಾರೆ. ೩೦-೪೦ರ ಸೈಟಿಗೆ ೨೮ ಸಾವಿರ ರೂಪಾಯಿಗಳ ಚಾರ್ಜ್ ಮಾಡಿದ್ದಾರೆ. ಇದೇನು ಸಬ್ಸಿಡಿ ರೇಟೆ ಅಥವಾ ಲಕ್ಚುಯಲ್ ರೇಟೆ. ಹರಿಜನರಿಗೆ ಸೈಟು ವಿಂಗಡಣೆ ಮಾಡುವಾಗ, ಒಂದು ಏರಿಯಾ ನಿಗದಿ ಮಾಡಿ. ೧೮ ಪರ್ಸೆಂಟ್‌ನಂತೆ ಕೊಡಬೇಕೆಂಬ ವಿಚಾರ ಸರ್ಕಾರದ ಯೋಜನೆಯಲ್ಲಿದೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಅಧ್ಯಕ್ಷರೇ, ಈ ರೀತಿ ೧೮ ಪರ್ಸೆಂಟ್‌ನಂತೆ ಮೀಸಲಾತಿ ಮನೆಗಳನ್ನು ಒಂದೇ ಕಡೆ ಕೊಡುವಂಥ ವ್ಯವಸ್ಥೆ ಮಾಡಿಲ್ಲ. ಡಾ, ಅಂಬೇಡ್ಕರ್ ಜನ್ಮ ಶತಾಬ್ದಿ ಸಂದರ್ಭದಲ್ಲಿ, ಲಿಂಗರಾಜಪುರದ ಹತ್ತಿರ ಕೆಲವು ನಿವೇಶನಗಳನ್ನು ಕೊಟ್ಟಿದ್ದೇವೆ. ಈ ದೇವಿ ಪುಷ್ಪ ರಾಜ್ ಎಂದು ಏನು ತಾವು ಹೇಳಿದ್ದೀರಿ, ಅವರಿಗೆ ಮಾಮೂಲಿ ದರದಲ್ಲೇ ಕೊಟ್ಟಿದ್ದೇವೆ ೩೦×೪೦ ರ ನಿವೇಶನಗಳನ್ನು ಮಾಮೂಲಿ ದರದಲ್ಲೇ ಕೊಟ್ಟಿದ್ದೇವೆ. ಯಾವುದೇ ತರವಾದಂಥ ರಿಯಾಯಿತಿ ದರ ಇಲ್ಲ.

ಅಧ್ಯಕ್ಷರು.—ಪ್ರಶ್ನೆ ೨೪೬ (೧೧೫೧) ಕಾಲಾವಕಾಶ ಕೇಳಿದ್ದಾರೆ. ಇದಕ್ಕೆ ಇನ್ನೂ ಉತ್ತರ ಬಂದಿಲ್ಲ. ಈಗ ಮುಂದಿನ ಪ್ರಶ್ನೆ, ಆರ್. ವೆಂಕಟರಾಮಯ್ಯನವರೇ ತಾವು ಕೇಳಬಹುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳ ವಿತರಣೆ.

೧೧೧೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) ಮಾನ್ಯ ಬೆಂಗಳೂರು ಅಭಿವೃದ್ಧಿ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೦–೮೧ ರಿಂದ ತಹಲ್‌ವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಎಷ್ಟು ಜನರು ನಿವೇಶನಗಳನ್ನು ಬೇಕೆಂದು ಅರ್ಜಿ ಹಾಕಿದ್ದಾರೆ ?

ಆ) ಎಷ್ಟು ಅರ್ಜಿದಾರರಿಗೆ ತಹಲ್‌ವರೆಗೆ ನಿವೇಶನಗಳನ್ನು ಕೊಡಲಾಗಿದೆ, ಬಾಕಿ ಇರುವ ಅರ್ಜಿದಾರರೆಷ್ಟು ?